## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ.

ಸಿ.ಸಿ. ನಂ. 640/2023

| | | |
|---|---|---|
| ಆರೋಪಿಯ ಹೆಸರು | : | ಬಿಲಾಲ ಮಕಾನದಾರ |
| ತಂದೆಯ ಹೆಸರು | : | ಸಯ್ಯದಸಾಬ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಅಂಬೇಡ್ಕರ ಸರ್ಕಲ ಹತ್ತಿರ, ಮಹಾಲಿಂಗಪೂರ |

ಆರೋಪಿಯ ಹೇಳಿಕೆ ಕಲಂ 313 ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ

ಪ್ರಶ್ನೆ - 1) ಫಿರ್ಯಾದಿ ಪರ ಸಾಕ್ಷ್ಯವನ್ನು ಕೇಳಿದ್ದೀರಾ ?

ಉತ್ತರಃ - ಕೇಳಿದೆ ಹು.

ಪ್ರಶ್ನೆ - 2) ಪಿ.ಡಬ್ಲ್ಯೂ-1 ಜಗದೀಶ ಮಲ್ಲಪ್ಪ ಬೆಟಗೇರಿ ಇವರು ತಮ್ಮ ಸಾಕ್ಷಿಯಲ್ಲಿ "ಆರೋಪಿತನು ಅವರ ಸೊಸೈಟಿ ಕಡೆಯಿಂದ ತನ್ನ ವ್ಯಾಪಾರ ಉದ್ಯೋಗದ ಸಲುವಾಗಿ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲವನ್ನು ತೀರಿಸುವ ಸಲುವಾಗಿ ದಿನಾಂಕಃ 10.04.2023 ರ ಕೆನರಾ ಬಾಂಕ, ಮಹಾಲಿಂಗಪೂರ ಶಾಖೆಯ ಚೆಕ್ ನಂ-140823 ರ ಮೇಲೆ ರೂ.95,834/ ಗಳನ್ನು ಪಾವತಿ ಮಾಡುವ ಉದ್ದೇಶದಿಂದ ಅಂದೇ ನಮ್ಮ ಸೊಸೈಟಿ ಹೆಸರಿಗೆ ಬರೆದುಕೊಟ್ಟಿರುತ್ತಾನೆ, ಸದರಿ ಚೆಕ್ಕನ್ನು ನಮ್ಮ ಖಾತೆ ಇರುವ ಡಿಸಿಸಿ ಬ್ಯಾಂಕ ಶಾಖೆ ಮಹಾಲಿಂಗಪೂರಕ್ಕೆ ನಗದೀಕರಣಕ್ಕಾಗಿ ಕೊಟ್ಟಿದ್ದು, ಆದರೆ ಆರೋಪಿಯ ಖಾತೆಯನ್ನು ಪರಿಶೀಲಿಸಿದಾಗ Account Closed ಎಂಬ ಹಿಂಬರಹದೊಂದಿಗೆ ದಿಃ 11.04.2023 ರಂದು ಮರಳಿ ಬಂದಿರುತ್ತದೆ ಅಂತಾ ಹೇಳುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ - ಸುಳ್ಳು

ಪ್ರಶ್ನೆ - 3) ಪಿ.ಡಬ್ಲ್ಯೂ-1 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ತನ್ನ ವಕೀಲರ ಮುಖಾಂತರ ದಿನಾಂಕಃ18.04.2023 ರಂದು ನೋಟಿಸನ್ನು ನೀಡಿದ್ದು ಸದರಿ ನೋಟೀಸನ್ನು ದಿಃ26.04.2023 ರಂದು ಆರೋಪಿತನು ಸ್ವೀಕರಿಸಿದ್ದು ಇಲ್ಲಿಯವರೆಗೂ ಸಹ ಹಣ ಕೊಡುವ

ವ್ಯವಸ್ಥೆ ಮಾಡಿರುವುದಿಲ್ಲ. ಆದ್ದರಿಂದ ಆರೋಪಿಯ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಹೇಳುತ್ತಾರೆ ಅಂತಾ ಹೇಳುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ - ಸುಳ್ಳು

ಪ್ರಶ್ನೆ - 4) ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಮಾಡಿಸುವುದು ಇದೆಯಾ ?

ಉತ್ತರಃ - ಮಾಡಿಸುತ್ತೇನೆ.

ಪ್ರಶ್ನೆ - 5) ನಿಮ್ಮ ಪರವಾಗಿ ಏನನ್ನಾದರೂ ಹೇಳುವುದು ಇದೆಯಾ?

ಉತ್ತರಃ - ಇಲ್ಲ

ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.

ಸ್ಥಳಃ ಬನಹಟ್ಟಿ

ದಿನಾಂಕಃ 04.07.2024

4/7/24

ಪ್ರ. ದ. ನ್ಯಾ.. ದಂಡಾಧಿಕಾರಿಗಳು,
ಬನಹಟ್ಟಿ .

BILAL